ಸ್ವಚ್ಛಗೊಳಿಸಬಹುದಿತ್ತು. ಆದರೆ ಆ ಪ್ರತಿಮೆಗೆ 'ಜಯಂತಿ' ಎಂಬುದು ಇರಲಿಲ್ಲವಾದ್ದರಿಂದ ಆ ಪ್ರಮೇಯ ಬರಲಿಲ್ಲ. ಮತ್ತು ಅದು ಯಾವುದೇ ಮತ–ಧರ್ಮಕ್ಕೆ ಸೇರಿರಲಿಲ್ಲ.

ಆ ವೃತ್ತದ ಸುತ್ತ ವ್ಯಾಪಾರ ವಹಿವಾಟು ನಡೆಸುವ ಜನರು ಆ ವೃತ್ತದೊಂದಿಗೆ ವ್ಯಾವಹಾರಿಕ ಸಂಬಂಧ ಹೊಂದಿದ್ದರು. ಅದರೊಂದಿಗೆ ಅವರಿಗೆ ಯಾವುದೇ ಭಾವನಾತ್ಮಕ ಸಂಬಂಧ ಇರಲಿಲ್ಲ.

ಆಗೊಂದು ದಿನ ಊರಿನಲ್ಲಿ ಸುದ್ದಿ ಹಬ್ಬಿತು. ದೂರದಲ್ಲಿ ಅದೆಲ್ಲೋ ಪ್ರತಿಮೆಗಳು ಉರುಳುತ್ತಿರುವ, ವಿಕಾರಗೊಳ್ಳುತ್ತಿರುವ ಸುದ್ದಿ ಊರೆಲ್ಲ ಪಸರಿಸಿತು. ತಮ್ಮ ಬದುಕಿನ ಜಂಜಾಟದಲ್ಲಿ ಮಗ್ನರಾಗಿದ್ದ ಜನರು ಈಗ ಆ ಪ್ರತಿಮೆಯನ್ನು ಕತ್ತೆತ್ತಿ ನೋಡಲು ಪ್ರಾರಂಭಿಸಿದರು. ಸುಲಭದಲ್ಲಿ ಗುರುತಿಸುವ ಸ್ಥಳವಾಗಿದ್ದ ಆ ವೃತ್ತದ ಹೆಸರು ಈಗ ಎಲ್ಲರ ಬಾಯೊಳಗಿನ ಎಲೆ ಅಡಿಕೆಯಾಯಿತು. ಜನರು ಪ್ರತಿಮೆಯ ಹೆಸರಿನ ಹಿನ್ನೆಲೆಯನ್ನು ಹುಡುಕಾಡಲು ಶುರುಮಾಡಿದರು. ಗ್ರಂಥಾಲಯಗಳನ್ನು ಹೊಕ್ಕು ಗೆದ್ದಲು ತಿಂದ ಪುಸ್ತಕಗಳನ್ನು ತಡಕಾಡಿದರು. ಊರೂರು ಅಲೆದು ಇತಿಹಾಸ ಅಗೆದರು. ಮೂಲೆ ಸೇರಿದ್ದ ಇತಿಹಾಸಕಾರರಿಗೆ ಒಮ್ಮೇಲೆ ಬೇಡಿಕೆ ಬಂತು. ಆ ಪ್ರತಿಮೆ ಯಾರದ್ದು? ಅವನ ತತ್ತ್ವಗಳೇನು? ಅವನ ಸಿದ್ಧಾಂತಗಳೇನು? ಇಂತಹ ಹಲವಾರು ಪ್ರಶ್ನೆಗಳು ಜನರಲ್ಲಿ ಮೊದಲ ಸಲ ಮೂಡಿದವು. ಮೂಕವಾಗಿ ನಿಂತ ಆ ಪ್ರತಿಮೆ ತನಗೆ ಸಂಬಂಧವೇ ಇಲ್ಲದ ಒಂದು ಸಣ್ಣ ತಲ್ಲಣವವನ್ನು ಊರಲ್ಲಿ ಹುಟ್ಟಿಸಿತ್ತು.

ವ್ಯಾಪಾರದಲ್ಲಿ ನಿರತರಾಗಿರುತ್ತಿದ್ದ ವೃತ್ತದ ಸುತ್ತಲಿನ ಜನ ಈಗ ತಮ್ಮ ವ್ಯವಹಾರಗಳನ್ನು ನಿಲ್ಲಿಸಿ ಇತಿಹಾಸದ ಹಿಂದೆ ಬಿದ್ದಿದ್ದರು. ಹುಟುಕಾಟ ಎತ್ತೆತ್ತಲೋ ಹೋಗಿ ಊರತುಂಬ ತಾತ್ತ್ವಿಕ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ದೈನಿಕದ ಬದುಕಿನಲ್ಲಿ ಉಭಯಕುಶಲೋಪರಿ ವಿಚಾರಿಸುತ್ತಿದ್ದ ಜನರು ಪರಸ್ಪರ ಅನುಮಾನದಿಂದ ನೋಡಲು ಶುರುಮಾಡಿದರು. ಆ ವೃತ್ತದ ಆಸರೆಯಲ್ಲಿದ್ದ ಜನರು ದಿನವೊಂದು ಸತ್ತು ಹುಟ್ಟುವುದರೊಳಗೆ ಪ್ರತಿಮೆಯನ್ನು ದ್ವೇಷಿಸಲು ಪ್ರಾರಂಭಿಸಿದರು; ಅದನ್ನು ನಾಶಗೊಳಿಸುವ ಸಂಚುಗಳನ್ನು ರೂಪಿಸಿದರು.

ಅದೇ ಸಮಯದಲ್ಲಿ ಅದೊಂದು ರಾತ್ರಿ ಮಳೆ ಸುರಿಯಿತು. ಆ ಜೋರು ಮಳೆಯಲ್ಲಿ ಆ ಪ್ರತಿಮೆ ತೊಳೆದು ಸ್ವಚ್ಛಗೊಂಡಿತು. ಆ ವೃತ್ತದಲ್ಲೇ ಹಾಯುತ್ತಿದ್ದರೂ ಒಮ್ಮೆಯೂ ಆ ಪ್ರತಿಮೆಯತ್ತ ಮುಖಮಾಡದ ಜನ ಉದ್ಭವಗೊಂಡ ಮೂರ್ತಿಯಂತಿರುವ ಅದನ್ನು ದಿಟ್ಟಿಸಿ ನೋಡಿದರು. ಅದರ ತೊಳೆದ ಮುಗುಳು ನಗು ಅವರನ್ನು ಎಂದಿನ ದೈನಿಕದಲ್ಲಿ ಒಂದು ಮಾಡಿ ಮುಂದಕ್ಕೆ ಕರೆದುಕೊಂಡು ಹೋಯಿತು.

## ಮುಹಮ್ಮದ್ ಯೂನುಸ್ ಸಾರವಾನ್

ಬಾಗಲಕೋಟೆಯ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನ ಎಂ.ಟೆಕ್. ವಿದ್ಯಾರ್ಥಿ ಓದು, ಬರಹ ಹವ್ಯಾಸ.